ಪಿಳ್ಳೈ ನೆನಪಾದಳು. ಕಳೆದ ಬಾರಿ ಬಂದು ಏರ್‌ಪೋರ್ಟ್ ಇಳಿದಾಗ ನನ್ನ ಹೆಸರಿನ ನಾಮಫಲಕವನ್ನು ಹಿಡಿದು ನಿಂತಿದ್ದ ಅವಳ ಚಿತ್ರ ಕಣ್ಣಿಂದೆ ಸುಳಿಯುವುದರೊಂದಿಗೆ 'ಲಾಸ್ಟ್ ಟೈಮ್ ಬಂದಾಗ ಅರುಂಧತಿ ನಿಮ್ಮನ್ನು ರಿಸೀವ್ ಮಾಡಿಕೊಂಡಿದ್ದಳಲ್ಲವಾ? ಎಂಥ ಲವ್ಲಿ ಪರ್ಸನಾಲಿಟೀನ ನಾವು ಕಳೆದುಕೊಂಡ್ವಿ. ನಿಮ್ಮ ಮನದಲ್ಲಿ ಅವಳು ಬೊಕೆ ಹಿಡಿದು ಅರೈವಲ್ ಗೇಟಿನ ಬಳಿ ನಿಂತಿರುವ ದೃಶ್ಯ ಮೂಡಿರಬೇಕು ಎಂದೆನಿಸುತ್ತದೆ ನನಗೆ...' ಅವಳ ಮಾತುಗಳು ನನ್ನನ್ನು ಅಚ್ಚರಿ ಮೂಡಿಸಿದ್ದವು. '**exactly,** ಅಷ್ಟು ಕರಾರುವಾಕ್ಕಾಗಿ ಹೇಗೆ ಹೇಳಿದಿರಿ?' ಅವಳ ಮುಖ ನೋಡಿ ಕೇಳಿದ್ದೆ. 'ನೀವಿಬ್ಬರೂ ದೇಹ ಹಂಚಿಕೊಂಡಿದ್ದನ್ನು ಅವಳು ನನ್ನನ್ನು ಆ ದಿನ ದೆಹಲಿಗೆ ಹೊರಟಾಗ ಏರ್‌ಪೋರ್ಟ್‌ಗೆ ಡ್ರಾಪ್ ಮಾಡಲು ಬಂದಾಗ ಹೇಳಿದ್ದಳು. ಒಂದು ಸಾರಿ ಆಪ್ತವಾಗಿ ಸುಖ ಹಂಚಿಕೊಂಡ ದೇಹಗಳೊಳಗಿನ ಮನಸ್ಸುಗಳು ಬೇಗನೆ ಸುಖದ ತಂತುಗಳನ್ನು ಬರಿದುಮಾಡಿಕೊಳ್ಳಲಾರವು...' ಅವಳ ಮಾತುಗಳು ಕಣ್ಣೊಳಗಿಂದ ಧುಮುಕಿ ನನ್ನೆದೆಯನ್ನು ತೊಯ್ದಿಸಿದಂತೆ ಅನುಭವವಾಗಿತ್ತು.

ಅರೈವಲ್ ಗೇಟ್ ದಾಟಿಕೊಂಡು ಹೊರಗೆ ಬಂದಾಗ ನಮ್ಮನ್ನು ಪಿಕ್ ಮಾಡಲು ಭಗವಾನ್ ಕುಟ್ಟಿ ಬಂದಿರುವುದು ಕಣ್ಣಿಗೆ ಬಿದ್ದಿತ್ತು. ನನ್ನನ್ನು ನೋಡಿ ನಕ್ಕ ಭಗವಾನ್ ಕುಟ್ಟಿಯ ಮುಖದಲ್ಲಿ ಒಂದು ರೀತಿಯ ನಿದ್ದೆಗೆಟ್ಟ ಭಾವ ತುಂಬಿಕೊಂಡಿತ್ತು. ಇನ್ನೋವಾ ಕಾರಿನ ಬಾಗಿಲನ್ನು ತೆರೆಯುತ್ತಾ, 'ನೀವು ಬರುತ್ತೀರೆಂದು ನಾನು ನಂಬಿರಲಿಲ್ಲ. ನಿಮ್ಮ ಅಣ್ಣ ವಿಕ್ರಮ್ ರೆಡ್ಡಿ ಸತ್ತ ಸುದ್ದಿಯನ್ನು ರಾಘವರೆಡ್ಡಿ ಬೆಳಿಗ್ಗೆ ಫೋನ್ ಮಾಡಿದಾಗ ತಿಳಿಸಿದರು. ಬೆಳಿಗ್ಗೆ ಟೀವಿಯಲ್ಲೂ ಬ್ರೇಕಿಂಗ್ ನ್ಯೂಸ್ ಬರುತ್ತಿತ್ತು. ಆತ್ಮಹತ್ಯೆಯೋ ಕೊಲೆಯೋ ಎಂದು ಚಾನಲ್‌ಗಳೇ ಕನ್‌ಫ್ಯೂಷನ್‌ನಲ್ಲಿವೆ. ನನಗೆ ಅನ್ನಿಸಿದಂತೆ ಅದು ಆತ್ಮಹತ್ಯೆಯೇ ಇರಬೇಕು. ಕೆಲವು ಚಾನೆಲ್‌ಗಳು ಅವರ ದೇಹವನ್ನೂ ತೋರಿಸಿದ್ದವು. ಅಂಥ ಕಾಯಿಲೆಗಳನ್ನು ಪರಕ್ಕಡುವಿನ ಪೆರುಮನ್ನನ್ ವೇಲನ್ ಒಂದೇ ವಾರದಲ್ಲಿ ವಾಸಿಮಾಡುತ್ತಿದ್ದ. ಮತ್ತೆ ಅದು ಜೀವ ಇರುವವರೆಗೂ ಬರುತ್ತಿರಲಿಲ್ಲ. ನಮ್ಮ ಮಾಧವನ್ ಪಿಳ್ಳೈ ಅಣ್ಣ ಮುರುಗನ್ ಪಿಳ್ಳೈ ಈ ಕಾಯಿಲೆ ಬಂದು ಸಾವಿನಂಚಿಗೆ ಹೋಗಿದ್ದ. ಫಾರಿನ್‌ನಿಂದ ಮೂವರು ಡಾಕ್ಟರುಗಳು ಬಂದಿದ್ದರು. ಪ್ರಯೋಜನವಾಗಲಿಲ್ಲ. ಆಗ ಪೆರುಮನ್ನನ್ ವೇಲನ್ ಇಲ್ಲೇ ಬಂದು ವಾರ ಇದ್ದು ಔಷಧಿ ಕೊಟ್ಟು ವಾಸಿಮಾಡಿದ. ಈಗ ಎಪ್ಪತ್ತೈದರಲ್ಲೂ ಉಕ್ಕಿನಂತೆ ಇದ್ದಾರೆ...' ಎಂದಿದ್ದ.

ಕಾರಿನ ಹಿಂದಿನ ಸೀಟಿನಲ್ಲಿ ಸಿಂಧು ಮೆನನ್ ಪಕ್ಕ ಕುಳಿತು 'ಎಲ್ಲಿದ್ದಾರೆ ಮುರುಗನ್ ಪಿಳ್ಳೈ?' ಎಂದು ಕೇಳಿದ್ದೆ. ಡ್ರೈವರ್ ಪಕ್ಕದ ಸೀಟಿನಲ್ಲಿ ಕೂತ ಭಗವಾನ್ ಕುಟ್ಟಿ 'ಹದಿನೈದು ವರ್ಷಗಳ ಹಿಂದೆ ಮುಂಬಯಿಗೆ ಹೋಗಿ ಸೆಟ್ಲಾದವರು ಫೈನಾನ್ಸಿಯಲಿ ಚೆನ್ನಾಗಿದ್ದಾರೆ. ಹೋಟೆಲ್ ಮತ್ತು ಫೈನಾನ್ಸ್ ನಡೆಸುತ್ತಿದ್ದಾರೆ. ಒಬ್ಬನೇ ಮಗ ತುಂಬಾ ಬುದ್ಧಿವಂತ. ಅವರ ಬಿಸಿನೆಸ್‌ಗೆ ಸುಧೀಂದ್ರ ನಯ್ಯಾರ್ ತುಂಬಾನೆ ಸಪೋರ್ಟ್ ಮಾಡಿದ್ದರು. ಕೊನೆಯ ದರ್ಶನಕ್ಕೆ ಇಂದು ಬಂದೇ ಬರ್ತಾರೆ ಅನ್ನೊ ನಂಬಿಕೆ ನನಗೆ...' ಎಂದು ಉತ್ತರಿಸಿದ್ದ.

ಕಾರು ಏರ್‌ಪೋರ್ಟ್ ಬಿಟ್ಟು ಮುಖ್ಯ ರಸ್ತೆಯಲ್ಲಿ ಚಲಿಸುತ್ತಿತ್ತು. 'ಹೊಟ್ಟೆಗೇನಾದರೂ ತಿನ್ನುತ್ತೀರಾ..?' ಭಗವಾನ್ ಕುಟ್ಟಿ ಕಾಳಜಿ ತೋರಿದ್ದ. 'ಫ್ಲೈಟ್‌ನಲ್ಲಿ ಆಗಿದೆ, ಸೀದಾ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್‌ಗೆ ಹೋಗೋಣ' – ಸಿಂಧು ಮೆನನ್ ಭಗವಾನ್ ಕುಟ್ಟಿಯ ಕಡೆ ನೋಡದೆಯೇ ಹೇಳಿದ್ದಳು. 'ಹದಿನೈದಿಪ್ಪತ್ತು ಸಾವಿರ ಜನ ಸೇರುವ ಅಂದಾಜು ಇದೆ. ಸುಧೀಂದ್ರ ನಯ್ಯಾರ್ ಮಾವನವರು ಈ ರೀತಿ ಮಾಡಿಕೊಂಡಿರುವುದಕ್ಕೆ ಇಡೀ ಕೇರಳವೇ ಬೆಚ್ಚಿಬಿದ್ದಿದೆ. ಕಬ್ಬಿಣದಂತೆ ಇದ್ದ ಮನುಷ್ಯ ಅದ್ಯಾಕೆ ಇಂಥ ವೈಪರೀತ್ಯಕ್ಕೆ ಒಡ್ಡಿಕೊಂಡರೋ ಈಗಲೂ ನಂಬಲು ಸಾಧ್ಯವಾಗುತ್ತಿಲ್ಲ ನನಗೆ...' ಭಗವಾನ್ ಕುಟ್ಟಿಯ ಮಾತುಗಳಲ್ಲಿ ತೆಳುವಾದ ನೋವಿನ ತೇವವಿತ್ತು. 'ಭಗವಾನ್, ಕಬ್ಬಿಣವನ್ನು ಯಾರೂ ಹಾಳು ಮಾಡುವುದಕ್ಕಾಗುವುದಿಲ್ಲ ನಿಜ, ಆದರೆ ಕಬ್ಬಿಣ ತನ್ನಲ್ಲಿ ತಾನೇ ಉತ್ಪಾದಿಸುವ ರಸ್ಟ್‌ನಿಂದಾಗಿ ಹಾಳಾಗಿ ಹೋಗುತ್ತದೆ. ಪಪ್ಪನ ವಿಷಯದಲ್ಲಿ ಕೂಡಾ ಹಾಗೆಯೇ ಆಗಿರುವುದು. ಹರೆಯದಲ್ಲಿ ಮಾಡಿದ ಅನೇಕ **immoral** ಕೃತ್ಯಗಳಿಂದಾಗಿ ತಮ್ಮ ಎದೆ–ಮನಗಳನ್ನು ಬಹಳವಾಗಿ ದಹಿಸಿಕೊಂಡರು. ಬರಬರುತ್ತಾ ಅವರು ತಮ್ಮಲ್ಲಿ ತಾವೇ **metaphysical discussion**ನಲ್ಲಿ ತೊಡಗಿಸಿಕೊಂಡಿರುತ್ತಿದ್ದದ್ದನ್ನು ನಾನೇ ಅನೇಕ ಬಾರಿ ಕಂಡಿದ್ದೇನೆ. ಅವರು ಆ ತರಹದ **metaphysical discussion**ನಲ್ಲಿ ತೊಡಗಿಸಿಕೊಂಡಿರುತ್ತಿದ್ದಾಗ ಅವರ ಬಾಯಿಂದ ಬರುತ್ತಿದ್ದ ಮಾತುಗಳು ಸಾಮಾನ್ಯ ಜನರಿಗೆ ಅರ್ಥವಾಗದಂತಿದ್ದರೂ ಯಜ್ಞಕುಂಡದಿಂದ ಹೊರಬರುತ್ತಿದ್ದ ಹೊಗೆಯಂತೆ ಘಮಘಮಸುತ್ತಿದ್ದವು. ಭಗವಾನ್ ನಿನಗೆ ಯಾವೊತ್ತೂ ಹೇಳದ ಒಂದು ಮಾತನ್ನು ಇವೊತ್ತು ಹೇಳುತ್ತೇನೆ ಕೇಳು. ನಾವು ಡೇರಾ ಆಶ್ರಮದಿಂದ ತಪ್ಪಿಸಿಕೊಂಡು ಇಲ್ಲಿಗೆ ಬಂದಾಗ ಪಪ್ಪ ಬಂದ ದಿನವೇ ನಿನ್ನನ್ನು ಚೂರು ಚೂರು ಮಾಡಿ ಇಡುಕ್ಕಿ ಡ್ಯಾಂನಲ್ಲಿನ ಮೀನುಗಳಿಗೆ ಆಹಾರವಾಗಿ ಎಸೆಯಬೇಕೆಂದು ತೀರ್ಮಾನಿಸಿದ್ದರು. ಆದರೆ ನಾನು, 'ಪಪ್ಪಾ, ಭಗವಾನದೇನೂ ತಪ್ಪಿಲ್ಲ. ಡೇರಾದಿಂದ ತಪ್ಪಿಸಿಕೊಳ್ಳಲು ಭಗವಾನನನ್ನು ನಾನೇ ಬಳಸಿಕೊಂಡೆ. ಇಷ್ಟಕ್ಕೂ ನನ್ನ ದೇಹವನ್ನು ಭಗವಾನ್ ಯಾವೊತ್ತೂ ಒಂದೇ ಒಂದು ಕ್ಷಣ ಬಳಸಿಕೊಳ್ಳಲೂ ಇಲ್ಲ, ನೋಯಿಸಲೂ ಇಲ್ಲ. ನೀನು ಮಾಡಿದ ಯಾವುದೋ ಘನಕಾರ್ಯದ ಪುಣ್ಯದಿಂದಾಗಿ ಅವ ನನಗೆ ಸಿಕ್ಕಿದ್ದಾನೆ. ಡೇರಾ ಆಶ್ರಮದಲ್ಲಿ ಬಾಬಾಗೆ ತುಂಬಾ ಆಪ್ತರಾದವರು ನನ್ನನ್ನು ಕೊಲ್ಲುವ ಸಂಚನ್ನು ಮಾಡಿದ್ದರು. ಅದು ಗೊತ್ತಾಗಿ ಭಗವಾನನನ್ನು ನೆಪವಾಗಿಟ್ಟುಕೊಂಡು ಪಾರಾಗಿ ಬಂದೆ...' ಎಂದು ಕನ್ವಿನ್ಸ್ ಮಾಡಿದ್ದೆ. ಇಷ್ಟಕ್ಕೂ ಡೇರಾ ಆಶ್ರಮದಲ್ಲಿ ನಡೆದಿದ್ದ ಸಂಚಿನ ಬಗ್ಗೆ ಕೂಡಾ ಇವೊತ್ತೇ ನಿನಗೆ ಹೇಳ್ತಿರೋದು ಭಗವಾನ್...' ಸಿಂಧು ದೀರ್ಘವಾಗಿ ಮಾತನಾಡಿ ನನ್ನ ಕಡೆ ನೋಡಿದ್ದಳು. ಅವಳ ಮಾತುಗಳಲ್ಲಿ ಭಾವುಕತೆಯ ಲೇಪನವಿಲ್ಲದಿದ್ದರೂ ಮುಖದಲ್ಲಿ ಅದು ಸಣ್ಣಗೆ ಮನೆಮಾಡಿದಂತಿತ್ತು.

ಇಡೀ ಜಗತ್ತು ಭೂಪಟದಲ್ಲಿ ಒಂದು ಚಿತ್ರದಂತೆ ಕಂಡರೂ ಅದು ಜೀವ ಪಡೆದುಕೊಂಡಾಗ ಪಂಚಭೂತಗಳೊಂದಿಗೆ ಸೃಷ್ಟಿಸುವ ಚಲನಶೀಲತೆಯ ಜೀವಂತಿಕೆ ಮತ್ತು ವಿನಾಶಗಳು ಥಟ್ಟನೆ ನೆನಪಾಗಿದ್ದವು. ಪ್ರತಿಯೊಬ್ಬ ಮನುಷ್ಯ ಕೂಡಾ ಹೊರನೋಟಕ್ಕೆ ಕಾಣುವುದು ಒಂದು ಭೂಪಟದಂತೆಯೇ ಸರಿ. ಸ್ವಾಮಿ ಶಬರಿಮಲೈ ಅಯ್ಯಪ್ಪ. ಸುಧೀಂದ್ರ ನಯ್ಯಾರರಿಂದ ನನ್ನನ್ನು ಕಾಪಾಡಿದ ಸಿಂಧು ನನಗೆ ಜನ್ಮ ಕೊಟ್ಟ ದೇವತೆಯಂತಾದರೆ, ಪ್ರವಾಹದಿಂದ ನನ್ನನ್ನು ಪಾರುಮಾಡಿದ ಕ್ರಾಂತಿ ಕಿರಣ್ ರೆಡ್ಡಿ ದೇವರೇ ಸರಿ. ಸಾಯುವವರೆಗೆ ಬೇಕಾದರೂ ಇಬ್ಬರ ಸೇವೆಯನ್ನು ಮಾಡಿಕೊಂಡಿರುತ್ತೇನೆ...' ಎಂದು ಭಗವಾನ್ ಕುಟ್ಟಿ ಧ್ಯಾನಸ್ಥ ಸ್ಥಿತಿಯಲ್ಲಿ ಸ್ವಲ್ಪ ಜಾಸ್ತಿಯೇ ಭಾವುಕನಾಗಿ ಹೇಳಿದ್ದ. 'ನಿಮಗೆ ಕರ್ಮ ಸಿದ್ಧಾಂತದ ಬಗ್ಗೆ ನಂಬಿಕೆ ಇದೆಯಾ..' ನನ್ನ ಕೈ ಮೇಲೆ ಕೈ ಇಟ್ಟು ಕೇಳಿದ್ದಳು ಸಿಂಧು ಮೆನನ್. ಭಗವಾನ್ ಕುಟ್ಟಿ ಮತ್ತು ಸಿಂಧು ಮೆನನ್ ಇಬ್ಬರು ಸೇರಿ ನನ್ನನ್ನೂ **metaphysical discussion** ನ ಪ್ರವಾಹದಲ್ಲಿ ಮೆಲ್ಲಗೆ ಇಳಿಸುತ್ತಿರಬಹುದೆ ಎಂಬ ಗುಮಾನಿ ಹುಟ್ಟಿತ್ತು. ಅಪ್ಪನೂ ಕರ್ಮ ಸಿದ್ಧಾಂತದ ಬಗ್ಗೆ ಆಗಾಗ ಮಾತನಾಡುತ್ತಿದ್ದದ್ದನ್ನು ಕೇಳಿದ್ದೆ. 'ನಾನು ಮುಖ್ಯವಾಗಿ ಅರ್ಥಶಾಸ್ತ್ರ ಓದಿಕೊಂಡವನು. ಜೊತೆಗೆ ಸೈಕಾಲಜಿಯಲ್ಲೂ ವಿಶೇಷ ಒಲವು ಹುಟ್ಟಿ ಅದರ ಬಗ್ಗೆಯೂ ಒಂದಿಷ್ಟು ಆಳಕ್ಕೆ ಹೋಗಲು ಪ್ರಯತ್ನಿಸಿದವನು. ಆದರೆ ಮನುಷ್ಯನ ಕೆಲವು ವರ್ತನೆಗಳನ್ನು ಯಾವ ಸಿದ್ಧಾಂತದ ಅಳತೆಗಳಲ್ಲೂ ಅಳೆಯಲು ಸಾಧ್ಯವಾಗುವುದಿಲ್ಲ ಎಂಬ ಅರಿವು ನನ್ನಲ್ಲೀಗ ಗಟ್ಟಿಯಾಗಿ ಬೇರೂರಿಬಿಟ್ಟಿದೆ. ಭಗವದ್ಗೀತೆಯನ್ನಾಗಲೀ, ಮನುಸ್ಮೃತಿಯನ್ನಾಗಲೀ ಅಥವಾ ಪುರಾಣಗಳನ್ನಾಗಲೀ ಪರಿಪೂರ್ಣವಾಗಿ ಅಭ್ಯಾಸ ಮಾಡಿದವನೂ ಅಲ್ಲ. ಆದರೆ ಒಬ್ಬ ಮನುಷ್ಯನ ಹುಟ್ಟು ಅವನ ಸ್ಥಾನಮಾನವನ್ನು , ಅಂತಸ್ತು, ಐಶ್ವರ್ಯಗಳನ್ನು ಬಹುಮಟ್ಟಿಗೆ ನಿರ್ಧರಿಸುವುದು ಅದೂ ಜಾತಿವ್ಯವಸ್ಥೆ ಬಲವಾಗಿ ಬೇರೂರಿರುವ ಭಾರತದಲ್ಲಂತೂ ಬಹಮಟ್ಟಿಗೆ ನಿಜವೇ ಆಗಿದೆ. ಆದರೆ ಮನುಷ್ಯನ ಹುಟ್ಟನ್ನು ಅವನ ಹಿಂದಿನ ಜನ್ಮಗಳ ಪಾಪ, ಪುಣ್ಯಗಳ ಫಲಗಳು ನಿರ್ಧರಿಸುತ್ತವೆಂಬುದನ್ನು ನಾನಂತೂ ನಂಬುವುದಿಲ್ಲ. ಏಕೆಂದರೆ, ಅಂಥದ್ದನ್ನು ಒಪ್ಪಬಹುದೆನ್ನಲು ಸ್ಥಾಪಿಸಲ್ಪಟ್ಟ ಯಾವ ವೈಜ್ಞಾನಿಕ ಸತ್ಯಗಳಾಗಲೀ, ತಾರ್ಕಿಕ ಸಾಕ್ಷ್ಯಾಧಾರಗಳಾಗಲೀ ನಮ್ಮ ಮುಂದೆ ಇನ್ನೂ ಪ್ರಕಟವಾಗಿಲ್ಲ. ನಮ್ಮ ಅಪ್ಪ ಕೂಡಾ ಕರ್ಮ ಸಿದ್ಧಾಂತದ ಬಗ್ಗೆ ಬಹಳಷ್ಟು ಹೇಳುತ್ತಿದ್ದರು. ಆದರೂ ನನಗೆ ಅದರ ಬಗ್ಗೆ ಕ್ಲಾರಿಟಿ ಸಿಗಲಿಲ್ಲ. ಮತ್ತು ಮುಂದೆ ಸಿಗುತ್ತದೆ ಎಂಬ ನಂಬಿಕೆಯೂ ಇಲ್ಲ...' ನನ್ನ ಮಾತುಗಳನ್ನು ತುಂಡರಿಸಿದಂತೆ ಸಿಂಧು ಮೆನನ್ನಳ ಸೆಲ್ ಫೋನ್ ಮೊಳಗಿತ್ತು.

(ಸಶೇಷ)